ಅಮಲ್ಜಾರಿ ಸಂಖ್ಯೆ 11/2014

ಪಿ.ಡಬ್ಲ್ಯೂ -2

**ದಿಃ 03.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಡಿಕ್ರಿ ಹೋಲ್ಡರ್ ನಂಬರ 1 ಬಿ ಡಿ ಇ ಎಫ್ ಪರ ಶ್ರೀ ಬಿ ಹೆಚ್ ವಕೀಲರಿಂದಃ -**

ಓ ಎಸ್ ನಂಬರ 15/2013 ರಲ್ಲಿ ನಿಮ್ಮ ತಂದೆಯವರು ಸಲ್ಲಿಸಿದ ಲಿಖಿತ ಹೇಳಿಕೆ ನೋಡಿ ಹೇಳಿ ಎಂದಾಗ ಸಾಕ್ಷಿ ನೋಡಿ ಹೌದು ಎನ್ನುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು ನಿ ಪಿ 16 ಎಂದು ಗುರುತಿಸಲಾಯಿತು. 2002 ರ ಮತದಾರರ ಪಟ್ಟಿಯನ್ನು ಸದರಿ ದಾವೆಗೆ ಹಾಜರುಪಡಿಸಿದ್ದೀರಾ ಎಂದರೆ ಸರಿ. ಸಾಕ್ಷಿಗೆ ತೋರಿಸಿದ ದಾಖಲೆಯನ್ನು ನಿ ಪಿ 17 ಎಂದು ಗುರುತಿಸಲಾಯಿತು. ನಿ ಪಿ 17 ರಲ್ಲಿ ಮನೆ ನಂಬರ 104 ಎ ನಮೂದು ಆಗಿರುತ್ತದೆ. 2013 ರ ಹರಪನಹಳ್ಳಿ ಮತದಾರರ ಪಟ್ಟಿಯಲ್ಲಿ ನಮ್ಮ ಮನೆಯ ಸಂಖ್ಯೆ 104 ಎ ಎಂದು ನಮೂದು ಆಗಿದೆ ಎಂದರೆ ಸರಿ. ಈ ಮತದಾರರ ಪಟ್ಟಿಯಲ್ಲಿ ಡೋರ್ ನಂಬರ 104 ಎ ಯಲ್ಲಿ ಯಾರ ಯಾರ ಹೆಸರುಗಳು ಇವೆ ಎಂದು ನೋಡಿ ಹೇಳಿ ಎಂದಾಗ ನನ್ನ ತಂದೆಯಾದ ನಾಗೇಂದ್ರಪ್ಪ, ನನ್ನ ತಾಯಿ ಲಲಿತಮ್ಮ, ನಾನು ಅಶೋಕ ನಮ್ಮ ಹೆಸರುಗಳ ಜೊತೆಗೆ ರಾಜೇಶ್ವರಿ, ರತ್ನಮ್ಮ, ಅಶ್ವಿನಿ ಇವರುಗಳ ಹೆಸರನ್ನು 2013 ರ ಇತ್ತೀಚಿನ ಮತದಾರರ ಪಟ್ಟಿಯಲ್ಲಿ ಸೃಷ್ಟಿ ಮಾಡಿಕೊಂಡು ಸೇರಿಸಿರುತ್ತಾರೆ. ಸಾಕ್ಷಿಗೆ ತೋರಿಸಿದ 2013 ರ ಮತದಾರರ ಪಟ್ಟಿಯನ್ನು ನಿ ಪಿ 18 ಎಂದು ಗುರುತಿಸಲಾಯಿತು. ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರ್ಪಡೆ ಮಾಡಬೇಕಾದರೆ ಕುಟುಂಬದ ಸದಸ್ಯರು ಮಾಹಿತಿ ಕೊಟ್ಟಾಗ ಮಾತ್ರ ಅವರು ಹೇಳಿದಂತೆ ಮತದಾರರ ಪಟ್ಟಿಯಲ್ಲಿ ಸೇರಿಸುತ್ತಾರೆ ಎಂದರೆ ಸರಿಯಲ್ಲ. ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರ್ಪಡೆ ಮಾಡಲು ವಯಸ್ಸು ಎಷ್ಟಾಗಿರಬೇಕು ಗೊತ್ತಾ ಎಂದರೆ ಕನಿಷ್ಟ 18 ವರ್ಷ ಆಗಿರಬೇಕು ಎನ್ನುತ್ತಾರೆ. ನಾಗೇಂದ್ರಪ್ಪನವರು ಮೃತ ಹೊಂದಿದ ನಂತರ ಅರಸಿಕೇರಿ ನಾಡಕಚೇರಿಗೆ ವಂಶವೃಕ್ಷ ಮತ್ತು ಜೀವಂತ ಇರುವ ಸದಸ್ಯರ ದೃಢಿಕರಣ ಪತ್ರವನ್ನು ಪಡೆಯಲು ಹೋಗಿದ್ರಿ ಎಂದರೆ ಸರಿ. ಆ ಅರ್ಜಿಗೆ ನಾಗೇಂದ್ರಪ್ಪನ ಮಗಳು ತಕರಾರು ಸಲ್ಲಿಸಿದ್ದರು

ಅಮಲ್ಜಾರಿ ಸಂಖ್ಯೆ 11/2014

ಪಿ.ಡಬ್ಲ್ಯೂ -2

ಎಂದರೆ ರಾಜೇಶ್ವರಿಯವರು ತಕರಾರು ಸಲ್ಲಿಸಿದ್ದರು ಎನ್ನುತ್ತಾರೆ. ಅವರು ತಕರಾರು ಸಲ್ಲಿಸಿದ ನಂತರ ನಾಡಕಚೇರಿಯವರು ನಾಗೇಂದ್ರಪ್ಪನವರ ಪೂರ್ಣ ವಿಳಾಸ ಕೊಟ್ಟಿರುವುದಿಲ್ಲ ಎಂದು ನಿಮ್ಮ ಅರ್ಜಿಯನ್ನು ತಿರಸ್ಕರ ಮಾಡಿದ್ದರು ಎಂದರೆ ಸರಿಯಲ್ಲ. ಯಾವ ಕಾರಣದಿಂದ ತಿರಸ್ಕಾರ ಮಾಡಿದ್ದರು ಎಂದರೆ ಯಾರಾದರೂ ತಕರಾರನ್ನು ಕೊಟ್ಟರೆ ಅವರ ಅರ್ಜಿಯನ್ನು ತಿರಸ್ಕಾರ ಮಾಡುತ್ತಾರೆ ಎನ್ನುತ್ತಾರೆ. ಯಾವ ಕಾರಣಕ್ಕೆ ತಿರಸ್ಕಾರ ಮಾಡಿದ್ದರು ಎಂಬ ಕಾರಣದ ಹಿಂಬರಹವನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲಿ ಹಾಜರುಪಡಿಸಿರುವುದಿಲ್ಲ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನೀವು ಧಾರವಾಡ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ತಿರಸ್ಕಾರ ಮಾಡಿದ ಆದೇಶದ ವಿರುದ್ಧ ರಿಟ್ ಅರ್ಜಿ ಸಲ್ಲಿಸಿದ್ರಿ ಎಂದರೆ ಸರಿ.

**(ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.